**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 63/2018**

**ಸಿ.ಡಬ್ಲ್ಯೂಃ 5**
**ಪಿ.ಡಬ್ಲೂಃ** 5

**ಸಾಕ್ಷಿದಾರರ ಹೆಸರು ಃ ಅರುಣ್ ಕುಮಾರ್**
**ತಂದೆಯ ಹೆಸರು ಃ ವೆಂಕಪ್ಪ ಗೌಡ**
**ವಯಸ್ಸು ಃ 42 ವರ್ಷ**
**ಉದ್ಯೋಗ ಃ ಕೃಷಿ**
**ವಾಸಸ್ಥಳ ಃ ಕಣಿವೆ ಗ್ರಾಮ, ನ ರಾ ಪುರ ತಾಲ್ಲೂಕು.**

**ದಿನಾಂಕಃ 9.6.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ತಿಳಿದಿರುವುದಿಲ್ಲ. ಸುಮಾರು 8 ವರ್ಷಗಳ ಹಿಂದೆ ಪೊಲೀಸರು ಒಂದು ದಾಖಲೆಗೆ ಸಹಿ ಮಾಡುವಂತೆ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ.ಅದೇ ಸಂದರ್ಭದಲ್ಲಿ ಪೊಲೀಸರು 3 ಭಾವಚಿತ್ರಗಳನ್ನು ತೆಗೆದುಕೊಂಡರು ಆದರೆ ಏಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ದಿನಾಂಕಃ 17.2.2017 ರಂದು ದಾಖಲಿಸಿರುವ ಜಪ್ತಿ ಪಂಚನಾಮೆಯನ್ನು (ಸದರಿ ಜಪ್ತಿ ಪಂಚನಾಮೆಯನ್ನು ದಿನಾಂಕಃ 21.1.2025 ರಂದು ತಪ್ಪಾಗಿ ನಿಪಿ-4 ಎಂದು ನಿಶಾನೆಗೊಳಿಸಲಾಗಿರುತ್ತದೆ) ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ನಿಪಿ-5 ರಲ್ಲಿ ಏನು ವಿಚಾರ ಬರೆದಿದೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು 3 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-6 ರಿಂದ 8 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 17.2.2017 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-4 ರವರನ್ನು ಪಂಚ ಸಾಕ್ಷಿದಾರರಾಗಿ ಸಹಕರಿಸುವಂತೆ ಈ ಪ್ರಕರಣದ ಬಗ್ಗೆ ಮಾಹಿತಿ ನೀಡಿ ನೋಟೀಸು ನೀಡಿದರು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಕಳ್ಳತನವಾಗಿರುವ ಅಡಿಕೆ ಮತ್ತು ಕಾಳುಮೆಣಸು ಸಾಗಿಸುತ್ತಿದ್ದ ವಾಹನ ಸಂಃ ಕೆಎ-20-ಡಿ-5378 ಟಾಟಾ ಯೇಸ್ ವಾಹನವನ್ನು ಪರಿಶೀಲಿಸಿ ಸದರಿ ವಾಹನದ ಬಳಿ ಇದ್ದ ವ್ಯಕ್ತಿಯ ಹೆಸರನ್ನು ಕೇಳಿ ವಿಚಾರಿಸಲಾಗಿ ಅವರು ಯಾವುದೇ ವಿಚಾರವನ್ನು ತಿಳಿಸದೇ ಇದ್ದುದ್ದರಿಂದ ವಾಹನವನು್ನ ಪರಿಶೀಲಿಸಿ ನೋಡಿದಾಗ ಸದರಿ ವಾಹನದಲ್ಲಿ ಕಳ್ಳತನವಾಗಿದ್ದ 10 ರಾಶಿ ಹಿಡಿ ಚೀಲಗಳಿದ್ದು, ಮತ್ತು ಅವುಗಳ ಒಟ್ಟು ತೂಕ 687 ಕೆಜಿ ಇದ್ದು, 2 ಹಳದಿ ಪ್ಲಾಸ್ಟಿಕ್ ಚೀಲದಲ್ಲಿ ಕಾಳುಮೆಣಸು ಇದ್ದು ಅದರ ಒಟ್ಟು ತೂಕ 45 ಕೆ ಜಿ ಇದ್ದು, ಸದರಿ ಕಳ್ಳತನವಾಗಿದ್ದ ಅಡಿಕೆ ಮತ್ತು ಕಾಳುಮೆಣಸನ್ನು ಮತ್ತು ವಾಹನ ಸಂಃಕೆಎ-20-ಡಿ-5378 ವಾಹನವನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸ್ಥಳದಲ್ಲಿಯೇ ಪೊಲೀಸರು ಬೆಳಗ್ಗೆ 11.30 ರಿಂದ 1 ಗಂಟೆಯವರೆಗೆ ಅಮಾನತು ಪಂಚನಾಮೆಯನ್ನು ದಾಖಲಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿಯೇ ಸದರಿ ಮಹಜರಿಗೆ ನಾನು ಓದಿ ತಿಳಿದುಕೊಂಡು ನಿಪಿ-5 ರಂತೆ ಸಹಿ ಮಾಡಿದೆ ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ 3 ಭಾವಚಿತ್ರಗಳನ್ನು ನಿಪಿ-6 ರಿಂದ 8 ರಂತೆ ತೆಗೆದುಕೊಂಡರು ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಪಾಟೀ ಸವಾಲು ಆರೋಪಿ 1 ಮತ್ತು 2 ಪರ ಶ್ರೀ. ಎಂ ಸಿ ವಕೀಲರಿಂದಃಃಇಲ್ಲಾಃಃ**

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**